ಅಳಿವೆ ಬಾಗಿಲಿನಲ್ಲಿ ಹೂಳೆತ್ತುವ ಕೆಲಸವನ್ನು ತೆಗೆದುಕೊಳ್ಳಲು ಬಹಳ ಹಿಂದಿನಿಂದಲೂ ಪ್ರಯತ್ನ ನಡೆಸುತ್ತಿದ್ದು ಅದು ಫಲಕಾರಿಯಾಗದ ಪ್ರಯುಕ್ತ ಭಾರತ ಸರ್ಕಾರದ ಸ್ವಾಮ್ಯದ ಡ್ರೆಜಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ ಸಂಸ್ಥೆಗೆ ಈ ಕೆಲಸವನ್ನು ಪಹಿಸಲಾಯಿತು. ಈ ಸಂಸ್ಥೆಯು, ಹೆಚ್ಚು ಸಾಮರ್ಥ್ಯದ ಶಕ್ತಿಯುತವಾದ ಯಂತ್ರವನ್ನು ಹೂಳೆತ್ತುವ ಕೆಲಸದಲ್ಲಿ ತೊಡಗಿಸಿದ್ದು, ನವೆಂಬರ್ ೧೯೮೯ ರಲ್ಲಿ ಅವರ ಪ್ರಯತ್ನದಲ್ಲಿ ಪ್ರಾಯೋಗಿಕ ಹೂಳೆತ್ತುವಿಕೆಯ ಎರಡನೇ ದಿನ ಹೂಳೆತ್ತುವ ಯಂತ್ರವು ಸಮುದ್ರದ ಅಲೆಗಳ ರಭಸದಿಂದಾಗಿ ನೀರಿನಲ್ಲಿ ಮುಳುಗಿದ್ದುದರ ಪ್ರಯುಕ್ತ ಹೂಳೆತ್ತುವ ಕೆಲಸವನ್ನು ಬಿಟ್ಟುಕೊಡಲಾಯಿತು. ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಆಗಿಲ್ಲ. ಈ ವರ್ಷದ ಮೀಳಿಗಾಲ ಪ್ರಾರಂಭದ ನಂತರ ಯಾವುದೇ ಜೀವಹಾನಿ, ಸೊತ್ತು ನಾಶ ದುರಂತಗಳು ಗಮನಕ್ಕೆ ಬಂದಿರುವುದಿಲ್ಲ. ಸದ್ಯದ ಪ್ರತಿಕೂಲ ಹವಾಮಾನ ಸ್ಥಿತಿಯಲ್ಲಿ ಅಳಿವೆಯಲ್ಲಿನ ಮರಳನ್ನು ತೆಗೆಯುವುದು ಮತ್ತು ಅಳಿವೆಯಲ್ಲಿ ಶಾಂತ ಸ್ಥಿತಿಯನ್ನು ನಿರ್ಮಿಸುವಲ್ಲಿಯವರೆಗೆ, ಹೂಳೆತ್ತುವುದು ಅಸಾಧ್ಯವೆಂಬುದಾಗಿ ಮೇಲಿನ ಡ್ರೆಜಿಂಗ್ ಸಂಸ್ಥೆಯು ಅಭಿಪ್ರಾಯಪಟ್ಟಿರುತ್ತದೆ. ಅಳಿವೆಯಲ್ಲಿ ಶಾಂತ ಸ್ಥಿತಿಯನ್ನು ನಿರ್ಮಿಸಲು ಅಲೆತಡೆ ಗೋಡೆಗಳನ್ನು ಕಟ್ಟಲು ಉದ್ದೇಶಿಸಿದ್ದು ಇದರ ನಿರ್ಮಾಣ ಕಾರ್ಯವನ್ನು ಸಧ್ಯದಲ್ಲಿಯೇ ಕೈಗೆತ್ತಿಕೊಳ್ಳಲಾಗುವುದು.

ಈ ಹೂಳೆತ್ತುವ ಕೆಲಸದ ಬಗ್ಗೆ ಡ್ರೆಜಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ ಸಂಸ್ಥೆಯವರೊಡನೆ ಈಗಲೂ ವ್ಯವಹರಿಸಲಾಗುತ್ತಿದೆ.

೨. ಪಾಸನದಲ್ಲಿ ಪಂಪುಸೆಟ್ಟುಗಳಿಗೆ ಪವರ್ ಕೊಡುವುದು ಮತ್ತು ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಕೊಡುವುದು.

ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಮಾನ್ಯ ಅಧ್ಯಕ್ಷರೇ, ಕಳೆದ ನಾಲ್ಕು ತಿಂಗಳಿಂದ ಹಾಸನದ ಕೆ. ಇ. ಬಿ. ಯವರು ಲೈನು ಎಳೆಯಲು ಬೇಕಾದ ಮೆಟೀರಿಯಲ್ಸ್ ಇಲ್ಲದೆ ಕೆಲಸ ಸ್ಥಗಿತವಾಗಿದೆ. ಪಂಪುಸೆಟ್ಟುಗಳಿಗೆ ಪವರ್ ಕೊಡುವುದು, ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಕೊಡುವುದು ಮುಂತಾದ ಎಲ್ಲಾ ಕೆಲಸಗಳು ನಿಂತಿರುವುದರಿಂದ ಮಾನ್ಯ ಇಂಡಸ್ಟ್ರೀಸ್ ಮತ್ತು ಪವರ್ ಮಿನಿಸ್ಟರ್‌ರವರ ಗಮನ ಸೆಳೆಯಬಯಸುತ್ತೇನೆ.

ಶ್ರೀಮತಿ ಸುಮಾವಸಂತ (ಮಾನ್ಯ ಕೈಗಾರಿಕಾ, ಇಂಧನ ಮತ್ತು ವಕ್ಫ್ ಮಂತ್ರಿಗಳ ಪರವಾಗಿ).—ಮಾನ್ಯ ಉಪಾಧ್ಯಕ್ಷರೇ,.....

ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯು ಹಾಸನ ಕಾರ್ಯ ಮತ್ತು ಪಾಲನೆ ವಿಭಾಗಕ್ಕೆ ಈ ಸಾಲಿನಲ್ಲಿ (೧೯೯೦-೯೧) ಏಪ್ರಿಲ್ ೧೯೯೦ ರಿಂದ ಜೂನ್ ೧೯೯೦ರ ಅಂತ್ಯದವರೆಗೆ ಸರಬರಾಜು ಮಾಡಲಾಗಿರುವ ಸಲಕರಣೆಗಳ ವಿವರ ಕೆಳಕಂಡಂತಿದೆ.

ವಿವಿಧ ಸಾಮರ್ಥ್ಯದ ಟ್ರಾನ್ಸ್‌ಫಾರ್ಮರ್‌ಗಳು	———	೧೧೫
ವಿವಿಧ ಗಾತ್ರದ ಎ.ಸಿ.ಎಸ್.ಆರ್. ಕಂಡಕ್ಟರುಗಳು	———	೨೪೯ ಕಿ.ಮೀ.

ಕಳೆದ ಮೂರು ವರ್ಷಗಳಲ್ಲಿ ಹಾಸನ ಜಿಲ್ಲೆಯಂಲ್ಲಿ ಗ್ರಾಮಗಳ ವಿದ್ಯುದ್ದೀಕರಣ ಉಪ ಗ್ರಾಮಗಳ ವಿದ್ಯುದ್ದೀಕರಣ, ನೀರಾವರಿ ಪಂಪ್‌ಸೆಟ್ಟುಗಳ ವಿದ್ಯುದ್ದೀಕರಣದಲ್ಲಿ ಸಾಧಿಸಿರುವ ಪ್ರಗತಿಯ ವಿವರಗಳು ಕೆಳಕಂಡಂತಿದೆ.

ವರ್ಷ	ಗ್ರಾಮಗಳ ವಿದ್ಯುದ್ದೀಕರಣ		ಉಪ ಗ್ರಾಮಗಳ ವಿದ್ಯುದ್ದೀಕರಣ		ನೀರಾವರಿ ಪಂಪುಸೆಟ್ಟುಗಳ ವಿದ್ಯುದ್ದೀಕರಣ	
	ಗುರಿ	ಸಾಧನೆ	ಗುರಿ	ಸಾಧನೆ	ಗುರಿ	ಸಾಧನೆ
೧೯೮೬–೮೮	೨೦೨	೧೬೯	೧	೨೨	೭೯೦	೧೫೮೦
೧೯೮೮–೮೯	೨೫	೨೪	೨೦	೧೬	೮೦೦	೧೧೬೦
೧೯೮೯–೯೦	—	—	೫೫	೪೦	೧೪೫೦	೧೩೫೯
೧೯೯೦–೯೧	—	—	೪	೨	೩೪೦	೩೩೩
			ಜೂನ್ ೯೦ರ ಅಂತ್ಯದ ವರೆಗೆ			
			ವಾರ್ಷಿಕ ಗುರಿ		ವಾರ್ಷಿಕ ಗುರಿ	
			೫೫		೨೧೫೦	

ಕಳೆದ ಮೂರು ವರ್ಷಗಳಲ್ಲಿ ಹಾಸನ ಜಿಲ್ಲೆಗೆ ಗ್ರಾಮಗಳ ವಿದ್ಯುದ್ದೀಕರಣ, ಉಪ ಗ್ರಾಮಗಳ (ಹ್ಯಾಮ್ಲೆಟ್) ವಿದ್ಯುದ್ದೀಕರಣದಲ್ಲಿ ನಿಗದಿ ಪಡಿಸಿರುವ ಗುರಿಯನ್ನು ಸಾಧಿಸಲಾಗಿದೆ. ನೀರಾವರಿ ಪಂಪ್‌ಸೆಟ್ಟುಗಳ ವಿದ್ಯುದ್ದೀಕರಣದಲ್ಲೂ ಸಹ ಗುರಿ ಮೀರಿದ ಸಾಧನೆಯನ್ನು ಸಾಧಿಸಲಾಗಿದೆ.

ಈ ಸಾಲಿನಲ್ಲಿ ಆರಂಭದ ತಿಂಗಳುಗಳಲ್ಲಿ ಸಾಮಗ್ರಿಗಳ ಸರಬರಾಜಿನಲ್ಲಿ ಸ್ವಲ್ಪ ವಿಳಂಬ ಉಂಟಾಗುತ್ತದೆ, ಕಾರಣ ಸಾಮಗ್ರಿಗಳ ಖರೀದಿ ಮತ್ತು ವಿವರಣೆಯನ್ನು ಆಯಾ ಜಿಲ್ಲೆಗಳಿಗೆ ನಿಗದಿ ಪಡಿಸಿರುವ ಗುರಿಯನ್ನು ಸಾಧಿಸಲು ಸಮಂಜಸ ರೀತಿಯಲ್ಲಿ ವ್ಯವಸ್ಥೆ ಮಾಡಬೇಕಾಗುತ್ತದೆ. ನಂತರದ ತಿಂಗಳುಗಳಲ್ಲಿ (ಸುಮಾರು ಆಗಸ್ಟ್ ೯೦ರ ನಂತರ) ಅಗತ್ಯವಿರುವ ಎಲ್ಲಾ ಸಾಮಗ್ರಿಗಳನ್ನು ಸರಬರಾಜು ಮಾಡಿ ವರ್ಷದ ಅಂತ್ಯದ ಒಳಗೆ ಈ ಜಿಲ್ಲೆಗೆ ನಿಗದಿ ಪಡಿಸಿರುವ ಗುರಿಯನ್ನು ಸಾಧಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುವುದು.

೩. ಹುಬ್ಬಳ್ಳಿ–ಧಾರವಾಡ ಜಿಲ್ಲೆಗಳ ತಾಲ್ಲೂಕುಗಳಲ್ಲಿನ ಬಡ ರೈತ ಕೂಲಿಗಾರರಿಗೆ ಕೆಲಸ ಒದಗಿಸುವುದು.

ಶ್ರೀ ಗೋಪಿನಾಥ ಆರ್. ಸಾಂಡ್ರ (ಹುಬ್ಬಳ್ಳಿ ಗ್ರಾಮಾಂತರ).—ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ ತಾಲ್ಲೂಕು ಹಾಗೂ ಧಾರವಾಡ ಜಿಲ್ಲೆಯ ಅನೇಕ ತಾಲ್ಲೂಕುಗಳಲ್ಲಿ ಮಳೆ ಬಾರದ್ದರಿಂದ ಬೀಜ ಬಿತ್ತನೆಯು ಸಹ ಆಗಿಲ್ಲ. ಕೆಲವು ಕಡೆ ಬಿತ್ತನೆ ಆಗಿದ್ದರೂ ಸಹ ಬೆಳೆ ಬರುವ ಲಕ್ಷಣವಿಲ್ಲ. ಬಡ ರೈತ ಕೂಲಿಕಾರರ ಉಪಜೀವನ ಸಾಗುವುದು ಸಹ ಕಠಿಣವಾಗಿದೆ. ಈವರೆಗೆಲ್ಲ ಕೆಲಸ ಒದಗಿಸಲು ಕಾರ್ಯಕ್ರಮವನ್ನು ಹಾಕಿಕೊಳ್ಳುವಿರಾ?

ಶ್ರೀ ಕೆ.ಹೆಚ್. ಪಾಟೀಲ್ (ಮಾನ್ಯ ಕಂದಾಯ ಮತ್ತು ಕಾರ್ಮಿಕ ಸಚಿವರು).—ಮಾನ್ಯ ಅಧ್ಯಕ್ಷರೆ, ಧಾರವಾಡ ಜಿಲ್ಲೆಯಲ್ಲಿ ಮೇ ೧೯೯೦ರ ಮಾಹೆಯಲ್ಲಿ ಸಾಧಾರಣಾ ಮಳೆಗಿಂತಲೂ ಹೆಚ್ಚು ಮಳೆ ಆಗಿರುತ್ತದೆ. ಆದರೆ ಜೂನ್ ೨೫ರವರೆಗೆ ಮಳೆ ಬಾರದೆ ಇದ್ದುದರಿಂದ ಬಿತ್ತಿದ ಬೆಳೆ ಒಣಗುವ ಪರಿಸ್ಥಿತಿ ಉಂಟಾಗಿದ್ದಿತು. ನಂತರ ಧಾರವಾಡ ಜಿಲ್ಲಾದ್ಯಂತ ತೃಪ್ತಿಕರ ಮಳೆ ಉಂಟಾಗಿದೆ. ಕೃಷಿ ಕಾರ್ಯಕ್ರಮಗಳು ಬಿರುಸಾಗಿ ನಡೆಯುತ್ತಿರುತ್ತವೆ. ರೈತ ಕಾರ್ಮಿಕರಿಗೆ ಉದ್ಯೋಗ ದೊರೆಯುತ್ತಿದೆ. ಗಾಣಿ ಬೆನ್ನೂರು ತಾಲ್ಲೂಕಿನಲ್ಲಿ ಮಾತ್ರ ಮಳೆ ಪ್ರಮಾಣವು ಸ್ವಲ್ಪ ಕಡಿಮೆ ಇರುತ್ತದೆ. ಆದಾಗ್ಯೂ ರೈತ ಕಾರ್ಮಿಕರು ಉದ್ಯೋಗದಲ್ಲಿ ತೊಡಗಿರುತ್ತಾರೆ. ಪರಿಸ್ಥಿತಿಯನ್ನು ಗಮನಿಸಲಾಗುವುದು. ಸೂಕ್ತ ಕ್ರಮವನ್ನು ಕೈಗೊಳ್ಳಲಾಗುವುದು.